KACM210037602022

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಕಡೂರು.

ದಿನಾಂಕ 8 ನೇ ಜೂನ್ 2026

**ಉಪಸ್ಥಿತರು**

**ಶ್ರೀ ಡಿ. ಕೆ. ಮಂಜುನಾಥ ಚಾರಿ**

**ಬಿ.ಎ., ಎಲ್ಎಲ್.ಬಿ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**
**ಕಡೂರು.**

**ಸಿ.ಎಂ.ಸಿ. ಸಂಖ್ಯೆ : 333/2022**

**ಅರ್ಜಿದಾರರು** : 1. ಶ್ರೀಮತಿ. ಕೆ.ಎಂ.ಶಾರದಮ್ಮ
ಕೋಂ. ವೈ.ಆರ್.ರವಿ,
ವಯಸ್ಸು ಸುಮಾರು 28 ವರ್ಷ,

2. ವೈ.ಆರ್.ಕುಶಾಲ್
ಬಿನ್. ವೈ.ಆರ್. ರವಿ,
ವಯಸ್ಸು ಸುಮಾರು 2 ½ ವರ್ಷ,

ವಾಸಃ ಪಿ.ಕೋಡಿಹಳ್ಳಿ ಗ್ರಾಮ, ಯಗಟಿ
ಹೋಬಳಿ, ಗರ್ಜೆ ಅಂಚೆ, ಕಡೂರು ತಾಲ್ಲೂಕು.

**(ಪ್ರತಿನಿಧಿಸುವವರು ಶ್ರೀ. ಕೆ.ಎ.ಎಸ್., ವಕೀಲರು)**

**ವಿರುದ್ಧ**

KACM210037602022

ಎದುರುದಾರರು : ಶ್ರೀ. ವೈ.ಆರ್.ರವಿ
ಬಿನ್ ರಾಮಪ್ಪ,(ಕರಿ ನಿಂಗಪ್ಪಾರ ಮನೆ),
ವಯಸ್ಸು ಸುಮಾರು 39 ವರ್ಷ,
ವಾಸಃ ಜಿ.ಯರದಕೆರೆ ಗ್ರಾಮ,
ಚೌಳಹಿರಿಯೂರು ಅಂಚೆ, ಯಗಟಿ
ಹೋಬಳಿ, ಕಡೂರು ತಾಲ್ಲೂಕು.

**(ಪ್ರತಿನಿಧಿಸುವವರು ಶ್ರೀ.ಎಸ್.ಎನ್.ಎ., ವಕೀಲರು)**

D K MANJUNATHACHARI Digitally signed by D K MANJUNATHACHARI Date: 2026.06.08 13:28:01 +0530

**(ಡಿ. ಕೆ. ಮಂಜುನಾಥ ಚಾರಿ)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

**:: ಆದೇಶ ::**

ಈ ಪ್ರಸ್ತುತ ಅರ್ಜಿಯನ್ನು ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 125 ರಡಿ ಸಲ್ಲಿಸಿರುತ್ತಾರೆ.

2. **ಈ ಪ್ರಸ್ತುತ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ** :

1 ನೇ ಅರ್ಜಿದಾರರು ಎದುರುದಾರರ ಧರ್ಮಪತ್ನಿಯಾಗಿರುತ್ತಾರೆ. ಇವರ ವಿವಾಹವು ದಿನಾಂಕ 30.05.2019 ರಂದು ಯಗಟಿಪುರದಲ್ಲಿರುವ ಶ್ರೀಮಲ್ಲಿಕಾರ್ಜುನ

**KACM210037602022**

ಸ್ವಾಮಿ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೆ ಗುರು–ಹಿರಿಯರ ಸಮ್ಮುಖದಲ್ಲಿ ನೆರವೇರಿರುತ್ತದೆ. ವಿವಾಹದ ನಂತರ 1ನೇ ಅರ್ಜಿದಾರರು ಒಂದುವರೆ ವರ್ಷಗಳ ಕಾಲ ಎದುರುದಾರರ ಜೊತೆ ಸಂತೋಷವಾಗಿ ಜೀವನ ಮಾಡಿರುತ್ತಾರೆ. ತದನಂತರ ಎದುರುದಾರರು ಮದ್ಯಪಾನ ಬಲಿಯಾಗಿ 1ನೇ ಅರ್ಜಿದಾರರು ಮತ್ತು ಆಕೆಯ ಮಗನಾದ 2ನೇ ಅರ್ಜಿದಾರರನ್ನು ನಿರ್ಲಕ್ಷಿಸಿರುತ್ತಾರೆ. ಅಲ್ಲದೆ 1ನೇ ಅರ್ಜಿದಾರರನ್ನು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುತ್ತಾರೆ. ಅಲ್ಲದೆ 1ನೇ ಅರ್ಜಿದಾರರನ್ನು ರಾತ್ರಿ ಅಸಹಜ ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಒತ್ತಾಯ ಮಾಡಿದ್ದು, ಒಪ್ಪದಿದ್ದಾಗ ಆಕೆಯ ಬಟ್ಟೆಗಳನ್ನು ಎಳೆದಾಡಿ ಕಾಲಿನಿಂದ ತುಳಿದಿರುತ್ತಾರೆ. ತದನಂತರ ಮೇಲಿನ ತಪ್ಪನ್ನು ಮರೆಮಾಚಲು ಎದುರುದಾರರು 1ನೇ ಅರ್ಜಿದಾರರ ವಿರುದ್ಧ ಕಡೂರಿನ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. 1ನೇ ಅರ್ಜಿದಾರರು ಕಳೆದ ಒಂದುವರೆ ವರ್ಷಗಳಿಂದ ತಲೆ ಸುತ್ತಿಗೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಎದುರುದಾರರು ವಾರ್ಷಿಕ 10 ರಿಂದ 15 ಲಕ್ಷ ಆದಾಯವನ್ನು ಹೊಂದಿರುತ್ತಾರೆ. ಅಲ್ಲದೆ ಸುಮಾರು 8 ಎಕರೆ ಜಮೀನು ಹೊಂದಿದ್ದು, 350 ತೆಂಗಿನ ಮರಗಳು ಹಾಗೂ 2 ಕೊಳವೆ ಬಾವಿಗಳನ್ನು ಹೊಂದಿರುತ್ತಾರೆ. ಹಾಗಾಗಿ ಅರ್ಜಿದಾರರು ತಮ್ಮ ಊಟ, ಬಟ್ಟೆ, ವಸತಿ, ವೈದ್ಯಕೀಯ ಮತ್ತು ಇತರೆ ಖರ್ಚುಗಳಿಗಾಗಿ

KACM210037602022

ಮಾಸಿಕ ರೂ.35,000/- ಜೀವನಾಂಶವನ್ನು ಕೋರಿ ಎದುರುದಾರರಿಗೆ ನಿರ್ದೇಶನ ಕೋರಿ ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

**3.** ಎದುರುದಾರರು ತನ್ನ ತಕರಾರಿನಲ್ಲಿ ತಿಳಿಸಿರುವುದೇನೆಂದರೆ, ಅರ್ಜಿದಾರರುಗಳು ಕ್ರಮವಾಗಿ ತನ್ನ ಹೆಂಡತಿ ಮತ್ತು ಮಗನೆಂದು ಒಪ್ಪಿಕೊಂಡಿರುತ್ತಾರೆ. ಆದರೆ ಅರ್ಜಿಯಲ್ಲಿ ತಿಳಿಸಿರುವಂತೆ ಎದುರುದಾರರು ಅರ್ಜಿದಾರರುಗಳನ್ನು ನಿರ್ಲಕ್ಷಿಸಿದ್ದರು ಎಂಬುವುದನ್ನು ಅಲ್ಲಗಳೆದಿರುತ್ತಾರೆ. 1 ನೇ ಅರ್ಜಿದಾರರು ಐಷಾರಾಮಿ ಜೀವನ ಮಾಡಲು ಅಗತ್ಯತೆಗಳನ್ನು ಒದಗಿಸುವಂತೆ ಎದುರುದಾರರಿಗೆ ಒತ್ತಾಯಪಡಿಸಿದ್ದು, ಸದರಿ ಐಷಾರಾಮಿ ಅಗತ್ಯತೆಗಳನ್ನು ಒದಗಿಸದಿದ್ದಾಗ 1 ನೇ ಅರ್ಜಿದಾರರು ಯಾವುದೇ ಸಕಾರಾಗಳಿಲ್ಲದೇ ದಿನಾಂಕ 22.11.2019 ರಂದು ಗಂಡನ ಮನೆಯನ್ನು ತೋರೆದಿರುತ್ತಾರೆ. ತದನಂತರ ದಿನಾಂಕ 03.02.2020 ರಂದು ಎದುರುದಾರರು ತನ್ನ ವಕೀಲರ ಮೂಲಕ 1 ನೇ ಅರ್ಜಿದಾರರಿಗೆ ತಿಳುವಳಿಕೆ ನೀಡಿದ್ದು, ಆದರೂ ಸಹ 1 ನೇ ಅರ್ಜಿದಾರರು ಎದುರುದಾರರ ವೈವಾಹಿಕ ಜೀವನಕ್ಕೆ ಆಗಮಿಸಿರುವುದಿಲ್ಲ. ಇದಾದನಂತರ ಎದುರುದಾರರು ದಿನಾಂಕ 18.03.2020 ರಂದು ಯಗಟಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಸದರಿ ಪೊಲೀಸ್ ಠಾಣೆಯಲ್ಲಿ 1 ನೇ ಅರ್ಜಿದಾರರಿಗೆ ತಿಳುವಳಿಕೆ ನೀಡಿದ್ದರೂ ಸಹ ಎದುರುದಾರರೊಂದಿಗೆ ಜೀವನ ನಡೆಸಲು ಒಪ್ಪಿರುವುದಿಲ್ಲ. ತದನಂತರ

KACM210037602022

ಎದುರುದಾರರು 1ನೇ ಅರ್ಜಿದಾರರ ವಿರುದ್ಧ ಎಂ.ಸಿ.ಸಂಖ್ಯೆ:64/2022 ರಂತೆ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಇತ್ಯರ್ಥಕ್ಕೆ ಬಾಕಿಯಲ್ಲಿದೆ. ಅಲ್ಲದೆ ಎದುರುದಾರರು ಅರ್ಜಿದಾರರೊಂದಿಗೆ ಜೀವನ ಮಾಡಲು ಸಿದ್ದರಿದ್ದು ಹಾಗೂ ಎದುರುದಾರುರ ತನ್ನ ವಯಸ್ಸಾದ ತಂದೆ - ತಾಯಿಗಳನ್ನು ನೋಡಿಕೊಂಡು ಹಾಗೂ ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದು, ಹಾಗಾಗಿ ಅರ್ಜಿಯನ್ನು ವಜಾಗೊಳಿಸಲು ಪ್ರಾರ್ಥಿಸಿದ್ದಾರೆ.

**4.** ಫಿರ್ಯಾದುದಾರರು/ಅರ್ಜಿದಾರರು ನ್ಯಾಯಾಲಯಕ್ಕೆ ಹಾಜರಾಗಿ ತನ್ನನ್ನು ಪಿ.ಡಬ್ಲ್ಯು-1 ಎಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ, ತನ್ನನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು ಹಾಗೂ ನಿಪಿ-1 ರಿಂದ ನಿಪಿ-12 ರವರೆಗೆ ದಾಖಲೆಗಳನ್ನು ತನ್ನ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಅಲ್ಲದೆ ಎದುರುದಾರರು ತನ್ನನ್ನು ಡಿ.ಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತನ್ನ ಪರವಾಗಿ ಯಾವುದೇ ದಾಖಲೆಗಳನ್ನು ನಿಶಾನೆಗೊಳಿಸಿಕೊಂಡಿರುವುದಿಲ್ಲ.

**5.** ಅರ್ಜಿದಾರರ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಲಾಯಿತು. ಎದುರುದಾರರು ಗೈರು ಹಾಜರಿದ್ದ ಕಾರಣ, ಅವರ ವಾದ ಮಂಡನೆ ಇಲ್ಲವೆಂದು ಪರಿಗಣಿಸಲಾಯಿತು. ನಂತರ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ

ಪ್ರಕರಣದ ನಿರ್ಣಯಕ್ಕೆ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಏನೆಂದರೆ:

**ಅಂಶ-1** : ಎದುರುದಾರರು ಅರ್ಜಿದಾರರನ್ನು ನೋಡಿಕೊಳ್ಳಲು ಸಾಕಷ್ಟು ಸಂಪನ್ಮೂಲಗಳು ಇದ್ದರೂ ಸಹ ಅವರನ್ನು ನಿರ್ಲಕ್ಷಿಸಿದ್ದಾರೆ ಎಂದು ಅರ್ಜಿದಾರರು ರುಜುವಾತುಪಡಿಸುವರೆ?

**ಅಂಶ-2** : ಹಾಗಾದರೆ ಏನು ಆದೇಶ ?

6. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆ:

| | | |
|---|---|---|
| ಅಂಶ -1 | - | ಸಕಾರಾತ್ಮಕವಾಗಿ |
| ಅಂಶ -2 | - | ಅಂತಿಮ ಆದೇಶದಂತೆ |

:: **ಕಾರಣಗಳು** ::

7. **ಅಂಶ - 1** :: ಒಂದನೇ ಅರ್ಜಿದಾರರು ಎದುರುದಾರರ ಧರ್ಮಪತ್ನಿಯಾಗಿದ್ದು, ಇವರಿಗೆ 2 ನೇ ಅರ್ಜಿದಾರರಾದ ವೈ.ಆರ್.ಕುಶಾಲ್ ರವರು ಮಗನಾಗಿದ್ದಾರೆ ಎಂಬ ಸಂಗತಿಯು ಎದುರುದಾರರಿಂದ ಒಪ್ಪಿತವಾಗಿದೆ.

8. ಅರ್ಜಿದಾರರು ಅರ್ಜಿಯಲ್ಲಿ ಹೇಳಿರುವಂತೆ ಎದುರುದಾರರು ಅಸಹಜ ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಒತ್ತಾಯಪಡಿಸುತ್ತಿದ್ದರು ಎಂಬುವುದನ್ನು

KACM210037602022

ರುಜುವಾತುಪಡಿಸಲು ಅರ್ಜಿದಾರರು ಯಾವುದೇ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

**9.** ಎದುರುದಾರರು ವಾರ್ಷಿಕ 10 ರಿಂದ 15 ಲಕ್ಷ ಸಂಪಾದಿಸುತ್ತಾರೆ ಎಂಬುದಕ್ಕೆ ಯಾವುದೇ ಸಾಕ್ಷ್ಯಧಾರಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-4 ರಿಂದ 7 ರಂತೆ ಅರ್ಜಿದಾರರು / ಪಿಡಬ್ಲ್ಯೂ -1 ರವರು ಕ್ರಮವಾಗಿ ಜಿ.ಯರದಕೆರೆ ಗ್ರಾಮದ ಸರ್ವೆ ನಂ.95/1, 98/2(ಎ), 94/10 ಮತ್ತು 34/5 ರ ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಸದರಿ ಪಹಣಿ ಪ್ರತಿಗಳು ಎದುರುದಾರರ ಹೆಸರಿನಲ್ಲಿ ನಮೂದಾಗಿರುತ್ತದೆ. ಅಲ್ಲದೇ ಸದರಿ ಪಹಣಿಗಳ ಕಲಂ 13 ರಲ್ಲಿ ಎದುರುದಾರರು ಸದರಿ ಸ್ವತ್ತುಗಳಲ್ಲಿ ರಾಗಿ, ತೆಂಗು ಬೆಳಗಳನ್ನು ಬೆಳೆದಿರುವ ಬಗ್ಗೆ ನಮೂದಾಗಿರುತ್ತದೆ. ಹಾಗಾಗಿ ಅರ್ಜಿದಾರರು ಅರ್ಜಿಯಲ್ಲಿ ತಿಳಿಸಿರುವಂತೆ, ಎದುರುದಾರರು ತನ್ನ ಸ್ವತ್ತುಗಳಲ್ಲಿ ತೆಂಗಿನ ಮರಗಳನ್ನು ಹೊಂದಿದ್ದು ಮತ್ತು ವ್ಯವಸಾಯದಿಂದ ಆದಾಯ ಹೊಂದಿರುವುದಕ್ಕೆ ಪುಷ್ಟೀಕರಣ ನೀಡುತ್ತದೆ.

**10.** ದಿನಾಂಕ 12.02.2020 ರಂದು ಎದುರುದಾರರ ಪರ ವಕೀಲರು ಪಿಡಬ್ಲ್ಯೂ -1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ 1 ನೇ ಅರ್ಜಿದಾರರು ಎದುರುದಾರರ ಮನೆಯಿಂದ ಹೊರಗೆ ಹೋಗುವಾಗ 4 ತಿಂಗಳುಗಳ ಗರ್ಭಿಣಿಯಾಗಿದ್ದೆ

KACM210037602022

ಎಂದು ನುಡಿದಿರುತ್ತಾರೆ. ಸದರಿ ಸಂಗತಿಯನ್ನು ನಿರಾಕರಿಸುವ ಸೂಚನೆಯನ್ನು ಎದುರುದಾರರ ಪರ ವಕೀಲರು ಪಾಟೀ ಸವಾಲಿನಲ್ಲಿ ಒಡ್ಡಿರುವುದಿಲ್ಲ. ಹಾಗಾಗಿ 1 ನೇ ಅರ್ಜಿದಾರರು 4 ತಿಂಗಳ ಗರ್ಭಿಣಿಯಾಗಿರುವಾಗ ಎದುರುದಾರರನ್ನು ತೊರೆದಿದ್ದಾರೆ ಎಂದಾಗ ಆಕೆಗೆ ಎದುರುದಾರರು ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿರುವ ಬಗ್ಗೆ ಪೂರ್ವಭಾವನೆ ಮಾಡಬಹುದು. ಅಲ್ಲದೆ 1 ನೇ ಅರ್ಜಿದಾರರು 4 ತಿಂಗಳ ಗರ್ಭಿಣಿಯಾಗಿರುವಾಗ ತನ್ನ ತವರು ಮನೆಗೆ ಹೋಗಿದ್ದು, ಹಾಗಾಗಿ ಸದರಿ ಗರ್ಭಿಣಿಯ ವೈದ್ಯಕೀಯ ವೆಚ್ಚಗಳು ಹಾಗೂ ಹೆರಿಗೆ ಮತ್ತು ಆ ನಂತರದ ವೈದ್ಯಕೀಯ ಖರ್ಚುಗಳನ್ನು 1 ನೇ ಅರ್ಜಿದಾರರ ತವರು ಮನೆಯವರೇ ಸಂದಾಯಿಸಿರುವ ಬಗ್ಗೆ ಅಲ್ಲಗಳೆಯಲು ಸಾಧ್ಯವಿರುವುದಿಲ್ಲ. ಹಾಗಾಗಿ ಎದುರುದಾರರು ತನ್ನ ಹೆಂಡತಿ ಮತ್ತು ಮಗುವನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

**11.** ಅರ್ಜಿದಾರರು ತಮ್ಮ ಅರ್ಜಿಯಲ್ಲಿ ತನ್ನ ಊಟ, ಬಟ್ಟೆ ವಸತಿ, ವೈದ್ಯಕೀಯ ಮತ್ತು ತನ್ನ ಮಗನ ಖರ್ಚುಗಳಿಗಾಗಿ ಮಾಸಿಕ ಒಟ್ಟು ರೂ.35,000/- ಜೀವನಾಂಶ ಕೋರಿರುತ್ತಾರೆ. ಎದುರುದಾರರು ತಮ್ಮ ತಕರಾರಿನಲ್ಲಿ ತಾನು ಕೂಲಿ ಕೆಲಸ ಮಾಡುವುದಾಗಿ ತಿಳಿಸಿರುತ್ತಾರೆ. ಹಾಗಾಗಿ ಸದರಿ ಒಪ್ಪಿಗೆಯಿಂದಲೇ ಎದುರುದಾರರು ಕೂಲಿ ಕೆಲಸದಿಂದ ಆದಾಯ ಹೊಂದಿರುವುದು ದೃಢವಾಗುತ್ತದೆ. ಅಲ್ಲದೆ ಪ್ರಸ್ತುತ

KACM210037602022

ದಿನಗಳಲ್ಲಿ ಸಾಮಾನ್ಯನಿಗೆ ದಿನದ ಕೂಲಿ ರೂ.500/- ರಿಂದ ರೂ.600/- ದೊರಕುತ್ತದೆ. ಹಾಗಾಗಿ 1 ನೇ ಎದುರುದಾರರು ಮಾಸಿಕ ರೂ.15,000/- ರಿಂದ ರೂ.18,000/- ದುಡಿಮೆ ಮಾಡುವುದನ್ನು ಅಲ್ಲಗಳೆಯಲು ಸಾಧ್ಯವಿರುವುದಿಲ್ಲ. ಹಾಗಾಗಿ ಪ್ರಸ್ತುತ ದಿನಗಳ ಜೀವನ ವೆಚ್ಚ ಮತ್ತು ಉಭಯ ಪಕ್ಷಗಾರರ ಖರ್ಚು-ವೆಚ್ಚಗಳನ್ನು ಪರಿಗಣಿಸಿ 1 ಮತ್ತು 2 ನೇ ಅರ್ಜಿದಾರರು ಕ್ರಮವಾಗಿ ಮಾಸಿಕ ರೂ.5,000/- ಮತ್ತು ರೂ.3,000/- ಜೀವನಾಂಶ ಪಡೆಯಲು ಅರ್ಹರೆಂದು ನ್ಯಾಯಾಲಯವು ತೀರ್ಮಾನಿಸಿದೆ. ಹಾಗಾಗಿ **ಅಂಶ- 1 ಅನ್ನು ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

12. **ಅಂಶ - 2** :: ಈ ಮೇಲಿನ ಅಂಶ-1 ರಲ್ಲಿ ಚರ್ಚಿಸಿದ ಸುದೀರ್ಘ ಕಾರಣಗಳಿಗಾಗಿ ನ್ಯಾಯಾಲಯವು ಮಾಡುವ ಆದೇಶ.

**ಆದೇಶ**

ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 125 ರಡಿ ಸಲ್ಲಿಸಿರುವ ಅರ್ಜಿಯನ್ನು ಮಾನ್ಯ ಮಾಡಲಾಗಿದೆ.

ಈ ಅರ್ಜಿ ಸಲ್ಲಿಸಿದ ದಿನಾಂಕದಿಂದ ಮಾಸಿಕ ರೂ.5,000/- ಜೀವನಾಂಶವನ್ನು 1 ನೇ ಅರ್ಜಿದಾರರಿಗೆ ನೀಡುವಂತೆ ಎದುರುದಾರರಿಗೆ ನ್ಯಾಯಾಲಯವು ನಿರ್ದೇಶಿಸಲಾಗಿದೆ ಮತ್ತು ಈ ಅರ್ಜಿ ಸಲ್ಲಿಸಿದ ದಿನಾಂಕದಿಂದ ಮಾಸಿಕ ರೂ.3,000/- ಜೀವನಾಂಶವನ್ನು 2 ನೇ ಅರ್ಜಿದಾರರಿಗೆ ಆತನು

KACM210037602022

ವಯಸ್ಕನಾಗುವವರೆವಿಗೆ ನೀಡುವಂತೆ ಎದುರುದಾರರಿಗೆ ನಿರ್ದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 08.06.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.)

D K MANJUNATHACHARI

Digitally signed by D K MANJUNATHACHARI
Date: 2026.06.08 13:28:10 +0530

**(ಡಿ. ಕೆ. ಮಂಜುನಾಥ ಚಾರಿ)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

**ಅನುಬಂಧ ::-**

**1) ದೂರುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:**

ಪಿ.ಡಬ್ಲ್ಯು-1 : ಶ್ರೀಮತಿ. ಕೆ.ಎಂ. ಶಾರದಮ್ಮ.

**2) ದೂರುದಾರರ ಪರ ಗುರುತಿಸಿದ ದಾಖಲಾತಿಗಳು :**

| | | |
|---|---|---|
| ನಿಪಿ-1 | : | ಮದುವೆಯ ಆಮಂತ್ರಣ ಪತ್ರಿಕೆ |
| ನಿಪಿ-2 | : | ಮದುವೆಯ ಫೋಟೋ |
| ನಿಪಿ-3 | : | ಮಾವನ ಹೆಸರಿನಲ್ಲಿರುವ ಜಮೀನಿನ ಪಹಣಿ ಪತ್ರಿಕೆ |
| ನಿಪಿ-4-7 | : | ಗಂಡನ ಹೆಸರಿನಲ್ಲಿರುವ ಜಮೀನಿನ 4 ಪಹಣಿ ಪತ್ರಿಕೆ |
| ನಿಪಿ-8-10 | : | ಮಾವನ ಹೆಸರಿನಲ್ಲಿರುವ ಉಳಿದ ಜಮೀನಿನ 3 ಪಹಣಿ ಪತ್ರಿಕೆ |

KACM210037602022

| | | |
|---|---|---|
| ನಿಪಿ-11 | : | ಎರಡನೇ ಅರ್ಜಿದಾರರ ಜನನ ಪ್ರಮಾಣ ಪತ್ರ |
| ನಿಪಿ-12 | : | ಜಂಟಿ ಖಾತೆ ಇರುವ ಪಹಣಿ. |

**3) ಎದುರುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ :**

ಆರ್.ಡಬ್ಲ್ಯೂ1 : ಶ್ರೀ.ವೈ.ಆರ್. ರವಿ.

**4) ಎದುರುದಾರರ ಪರ ಗುರುತಿಸಿದ ದಾಖಲಾತಿಗಳು :** ಇರುವುದಿಲ್ಲ.

D K MANJUNATHACHARI

Digitally signed by D K MANJUNATHACHARI
Date: 2026.06.08 13:28:16 +0530

**(ಡಿ. ಕೆ. ಮಂಜುನಾಥ ಚಾರಿ)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

Visit **ecourts.gov.in** for updates or download mobile app "**eCourts Services**" from Android or iOS